ಶ್ರೀ ಎಚ್.ಟಿ. ಕೃಷ್ಣಪ್ಪ.—ಅಧ್ಯಕ್ಷರೆ, ನಾನು ಜಾಗೃತ ಆಯೋಗದ ಮೇಲೆ ಆರೋಪ ಮಾಡಿದಾಗ ಅದು ಜಾಗೃತ ಆಯೋಗದ ಅಧ್ಯಕ್ಷರ ಮೇಲೆಯೇ ಎಂದು ಮಾನ್ಯ ಮಂತ್ರಿಗಳು ಭಾವನೆ ಮಾಡಬಾರದು. ಇಲ್ಲಿ ಜಾಗೃತ ಆಯೋಗದವರಿಗೆ ಸುದ್ದಿಯನ್ನು ಕೊಡುವವರೂ ಸಹ ಪೋಲೀಸಿನವರೇ ಹಾಗೂ ಕಾರ್ಯಾಚರಣೆ ಮಾಡುವವರೂ ಸಹಾ ಪೋಲೀಸರೇ ಆಗಿರುತ್ತಾರೆ. ಕೆಲವು ಸಂದರ್ಭದಲ್ಲಿ ನಾಳೆ ನಾಳಿದ್ದರಲ್ಲಿ ಪ್ರಮೋಷನ್ ಸಿಗುವಂತಹವರ ಮೇಲೆ ಇವರು ರೈಡ್ ಮಾಡುತ್ತಾರೆ. ಇದರಿಂದಾಗಿ ಅಂಥವರನ್ನು ಸಸ್ಪೆಂಡ್ ಮಾಡುವುದರಿಂದ ಅವರಿಗೆ ದೊರಕುವ ಪ್ರಮೋಷನ್ ನಿಂತು ಹೋಗುತ್ತದೆ. ಅವರು ಇನ್ನು ಮುಂದೆ ಅವರ ಜೀವನದಲ್ಲಿ ಒಂದು ಪ್ರಮೋಷನ್ ಎಂಬುದನ್ನು ನೋಡುವುದಕ್ಕಾಗುವುದಿಲ್ಲ. ಈಗ ಅಧಿಕಾರಿಗಳಲ್ಲೂ ಕೂಡಾ ಒಂದು ವಿಧವಾದ ಜಾತೀಯತೆ, ಮತ್ತೊಂದು ಮಗದೊಂದು ವ್ಯಾಪಕವಾಗಿ ಹರಡಿದೆ. ಒಂದೇ ಜಾತಿಯಲ್ಲಿ ಈಗ ಹಲವಾರು ಪಂಗಡಗಳು ಇವೆ, ಇದನ್ನು ಯಾವ ರೀತಿ ತಡೆಗಟ್ಟಬೇಕೆಂದು ಸರ್ಕಾರ ಗಮನಿಸಬೇಕು. ಎಲ್ಲಿ ಮೈಲಿಗೆ ಇರುತ್ತದೆ ಅದನ್ನು ಇಟ್ಟು ಕೊಂಡಿರುವುದಕ್ಕೆ ಸಾಧ್ಯವಿಲ್ಲ. ಆ ಹೊಲಸನ್ನು ಆದಷ್ಟು ಬೇಗ ತೊಳೆಯಬೇಕಾಗುತ್ತದೆ. ಸರ್ಕಾರಕ್ಕೆ ಪ್ರಾಮಾಣಿಕ ಇಚ್ಛೆ ಇರಬಹುದು. ಯಾವ ಇಲಾಖೆಗಳಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿ ಹಾಗೂ ಆಳವಾಗಿ ಹರಡಿಕೊಂಡಿದೆ ಆ ಇಲಾಖೆಗಳನ್ನು ಈಗಲೂ ಕೂಡಾ ಕೈಬಿಟ್ಟಿದ್ದೀರಿ. ಹೆಚ್ಚು ಮುತುವರ್ಜಿಯಿಂದ ಸರ್ಕಾರ ಆ ಬಗ್ಗೆ ಗಮನ ಕೊಡಬೇಕಾಗುತ್ತದೆಂದು ನಾನು ಈ ಮೂಲಕ ತಿಳಿಸಬಯಸುತ್ತೇನೆ.

Representation by Members

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ನಾನು ಒಂದು ಸೀರಿಯಸ್ ಮ್ಯಾಟರ್ ಬಗ್ಗೆ ನೋಟೀಸನ್ನು ಕಳುಹಿಸಿಕೊಟ್ಟಿದ್ದೆ.

MR. DEPUTY SPEAKER.—You raise it after some time.

SRI MICHAEL B. FERNANDES.—It is with regard to St. John's college...ದಯಮಾಡಿ ಇದನ್ನು ಗಮನಿಸಬೇಕು. ಅಲ್ಲಿ ವಿದ್ಯಾರ್ಥಿಗಳಿಗೆ...

MR. DEPUTY SPEAKER.—We have received that notice. Do not raise it now.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಈ ವಿಷಯದ ಬಗ್ಗೆ ನಾನು ಎಂದು ಪ್ರಸ್ತಾಪ ಮಾಡಲಿ.

ಉದಾಧ್ಯಕ್ಷರು.—ನಾಳೆ ಮಾಡಿ.

ಶ್ರೀಮತಿ ಸುಶೀಲಾ ಚೆಲುವರಾಜ್.—ಅಧ್ಯಕ್ಷರೆ, ಈ ಹಿಂದೆ ಮಾತನಾಡಿದ ಮಾನ್ಯ ಸದಸ್ಯರೊಬ್ಬರು ತಮ್ಮ ಭಾಷಣದಲ್ಲಿ ಕೆಲವು ಅನ್‌ಪಾರ್ಲಿಮೆಂಟರಿ ಪದಗಳನ್ನು ಉಪಯೋಗಿಸಿರುತ್ತಾರೆ. ಅವುಗಳನ್ನು ದಯಮಾಡಿ ಕಡತದಿಂದ ತೆಗೆದುಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

PRESENTATION OF PETITIONS

SRI D. T. MAYANNA.—Sir, I present a petition signed by the Chairman, Group Panchayat, Nidasale, Kunigal Taluk, Tumkur District, regarding drinking water facility to Nidasale Villge.

SRI N. B. SIRDESAI.—Sir, I present a petition signed by the TCH Trained candidates of Khanapur Taluk regarding indiscrimination shown by the Selection Committee while selecting TCH trained candidates.

MR. DEPUTY SPEAKER.—Petitions presented.